ವಿಷಯ: ಆಲಮಟ್ಟಿ ಸಂತ್ರಸ್ತರಿಗೆ ನೌಕರಿ.

2660 (3141)

ಶ್ರೀ ರಾಜಶೇಖರ್ ವಿ.ಶೀಲವಂತ (ಗುಳ್ಳೇದಗುಡ್ಡ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷ್ಣ ಮೇಲ್ದಂಡೆ ಯೋಜನೆಯಡಿಯಲ್ಲಿ ಮುಳುಗಡೆ ಹೊಂದಿದ ಸಂತ್ರಸ್ಥರ ಕುಟುಂಬದಲ್ಲಿ ಒಬ್ಬರಿಗೆ ನೌಕರಿ ಕೊಡಲು ಸರ್ಕಾರವು ಯೋಚಿಸಿದೆಯೇ?

ಆ) ಹಾಗಿದ್ದಲ್ಲಿ ಎಷ್ಟು ಜನರಿಗೆ ನೌಕರಿ ಒದಗಿಸಲಾಗಿದೆ?

ಇ) ಯಾವ ಯಾವ ಊರುಗಳಲ್ಲಿ ಎಷ್ಟು ಜನರಿಗೆ ನೌಕರಿ ಒದಗಿಸಲಾಗಿದೆ ಎಂಬುದನ್ನು ತಿಳಿಸಬೇಕು?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):

ಅ) ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ವಿಷಯ: ಅಂಗವಿಕಲರಿಗೆ ಇರುವ ಸೌಲಭ್ಯಗಳ ಕುರಿತು.

2661 (2974)

ಶ್ರೀ ರಾಜಶೇಖರ ವಿ.ಶೀಲವಂತ (ಗುಳ್ಳೇದಗುಡ್ಡ): ಮಾನ್ಯ ಮಹಿಳಾ ಮತು ಮಕ್ಕಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಜನ ಅಂಗವಿಕಲರಿದ್ದಾರೆ ಸರ್ಕಾರವು ಅಂವಿಕಲರಿಗೆ ನೀಡಿದ ಅನುಕೂಲಗಳೇನು?

ಆ) ಎಷ್ಟು ಜನ ಅಂಗವಿಕಲರು ಸರ್ಕಾರದ ವಿವಿಧ ಅನುಕೂಲಗಳನ್ನು ಪಡೆದಿರುತ್ತಾರೆ?

ಶ್ರೀಮತಿ. ವಿಮಲಾಬಾಯಿ ಜಗದೇವರಾವ್ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಸಚಿವರು):

ಅ) 1991ರ ಅಂಗವಿಕಲರ ಜನಗಣತಿಯ ಸಮೀಕ್ಷೆಯ ಪ್ರಕಾರ ರಾಜ್ಯದಲ್ಲಿ

3,65,819 ಜನ ಅಂಗವಿಕಲರಿದ್ದಾರೆ. ಇವರಿಗೆ ಸರ್ಕಾರ ಒದಗಿಸಿರುವ ಅನುಕೂಲಗಳು:-

1) ಶೈಕ್ಷಣಿಕ ಯೋಜನೆ:

ಅ) ಸರ್ಕಾರಿ ಮತ್ತು ಸರ್ಕಾರೇತರ ಅಂಗವಿಕಲ ಮಕ್ಕಳ ಶಾಲೆಗಳು

2) ಶಿಷ್ಯ ವೇತನ

3) ಪ್ರೋತ್ಸಾಹ ಧನ

4) ಅಂಧರಿಗೆ ಶ್ರವ್ಯ ಗ್ರಂಥಾಲಯ ಸ್ಥಾಪನೆ

5) ಮೂಲಧನ ಯೋಜನೆ

6) ಉದ್ಯೋಗ ಮತ್ತು ತರಬೇತಿ ಸೌಲಭ್ಯಗಳು

7) ಆಧಾರ ಯೋಜನೆ

8) ಹೊಸಹೆಜ್ಜೆ ತರಬೇತಿ ಹಾಗೂ ಉತ್ಪಾದನಾ ಘಟಕ ಸ್ಥಾಪಿಸುವುದು

9) ಸಾಧನಾ ಸಲಕರಣೆಗಳನ್ನು ಒದಗಿಸುವುದು

10) ಅಂಗವಿಕಲರ ಪೋಷಣಾ ಭತ್ಯೆ

11) ಅರಿವು ಮೂಡಿಸುವ ಕಾರ್ಯಕ್ರಮಗಳು

12) ಶಾಶ್ವತ ಗುರುತಿನ ಚೀಟಿ

13) ಪೆಟ್ರೋಲ್ ಸಬ್ಸಿಡಿ

14) ವಿಮಾ ಯೋಜನೆ

15) ರಾಜ್ಯ ಮತ್ತು ಕೇಂದ್ರ ಪ್ರಶಸ್ತಿ ಯೋಜನೆ

16) ಕ್ರೀಡೆ ಮತ್ತು ಕಲೆಗಳಿಗೆ ಪ್ರೋತ್ಸಾಹ

ಆ) 1996-97ನೇ ಸಾಲಿನಲ್ಲಿ ಸೌಲಭ್ಯಗಳನ್ನು ಒದಗಿಸಲಾಗಿದೆ.

ಫಲಾನುಭವಿಗಳು - 2,77,582

ಸಂಸ್ಥೆಗಳು - 104

ವಿಷಯ: ರೈತರಿಗೆ ಪರಿಹಾರಧನ

2662 (3257)

ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪ್ರಸಕ್ತ ಸಾಲಿನಲ್ಲಿ ಮುಂಗಾರು ಮಳೆಯಾಗಿ ಬಿತ್ತನೆ ಕಾರ್ಯಮುಗಿದ ನಂತರ ಮಳೆಯಾಗದೆ ಬೆಳೆಗಳು ಒಣಗಿ ಕಂಗಾಲಾಗಿರುವ ರೈತರಿಗೆ ಸರ್ಕಾರದಿಂದ ಪರಿಹಾರ ಧನವನ್ನೇನಾದರೂ ಒದಗಿಸಲಾಗುವುದೇ?

ಆ) ಹಾಗಿದ್ದಲ್ಲಿ, ಯಾವಾಗ ಮಂಜೂರು ಮಾಡಲಾಗುವುದು?

ಶ್ರೀ ರಮೇಶ್ ಸಿ.ಜಿಗಜಿಣಗಿ (ಕಂದಾಯ ಸಚಿವರು):

ಅ) ಪ್ರಕೃತಿ ವಿಕೋಪ ಪರಿಹಾರನಿಧಿ ಅಡಿಯಲ್ಲಿ ನಿಯಮಾನುಸಾರ ಪರಿಹಾರ ನೀಡಲು ಅವಕಾಶವಿರುವುದಿಲ್ಲ

ಆ) ಉದ್ಭವಿಸುವುದಿಲ್ಲ.

ವಿಷಯ: ದೇವದಾಸಿಯರ ಮಕ್ಕಳಿಗೆ ವಿಶೇಷ ವಿದ್ಯಾರ್ಥಿ ವೇತನ

2665 (3256)

ಶ್ರೀ ರೇವು ನಾಯಕ್ ಬೆಳಮಗಿ (ಕಮಲಾಪುರ): ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ದೇವದಾಸಿ ಮಕ್ಕಳ ಬಗ್ಗೆ ಸರ್ಕಾರವು ಹೊಸ ಯೋಜನೆ ಏನಾದರೂ ರೂಪಿಸಿದೆಯೇ?

ಆ) ಇವರುಗಳ ಅಭಿವೃದ್ಧಿಗಾಗಿ ಸರ್ಕಾರ ಏನಾದರೂ ಕ್ರಮ ಕೈಗೊಂಡಿದೆಯೇ? ಯಾವ ಯಾವ ಯೋಜನೆಗಳನ್ನು ಜಾರಿಗೊಳಿಸಲು ಯೋಚಿಸಿದೆ?

ಇ) ಗುಲ್ಬರ್ಗಾ ಜಿಲ್ಲೆಯ ಕಮಲಾಪುರದ ಚಿಂಚನಸೂರು ಗ್ರಾಮದಲ್ಲಿ ದೇವದಾಸಿಯರ ಸಂಖ್ಯೆ ಹೆಚ್ಚಾಗಿದ್ದು, ಇವರ ಕಲ್ಯಾಣಕ್ಕಾಗಿ ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಸರ್ಕಾರವು ವಿಶೇಷ ವಿದ್ಯಾರ್ಥಿ ವೇತನವನ್ನೇನಾದರೂ ಮಂಜೂರು ಮಾಡಲು ಯೋಚಿಸಿದೆಯೇ; ಹಾಗಾದರೆ ಯಾವಾಗ ಮಂಜೂರು ಮಾಡಲಾಗುವುದು?